ಪ್ರಾಚಾರ್ಯರ ಕಛೇರಿ
ಯುಬಿಡಿಟ ಇಂಜಿನಿಯರಿಂಗ್ ಕಾಲೇಜು
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಘಟಕ ಕಾಲೇಜು
ದಾವಣಗೆರೆ – 577 004

Off.: 08192-233414, 250716 Fax: 08192-233412

ಸಂಖ್ಯೆ:ಯುಬಿಡಿಟಿ: 03 :ಸಿಬ್ಬಂದಿ(1)/2018-19 ದಿನಾಂಕ: 06-08-2018

## " ಅಧಿಸೂಚನೆ "

ವಿಷಯ :– 2018–19 ನೇ ಶೈಕ್ಷಣಿಕ ಸಾಲಿನಲ್ಲಿ ದಾವಣಗೆರೆಯ ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕರುಗಳ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಸಲ್ಲಿಸಲು ತಿಳಿಸುತ್ತಿರುವ ಬಗ್ಗೆ.

ಉಲ್ಲೇಖ :– ಕುಲಸಚಿವರು, ವಿತಾವಿ, ಬೆಳಗಾವಿ ಇವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ ವಿತಾವಿ/ಬಿಜಿಎಮ್/ಡಿಪಿಎಆರ್/ಸಿಆರ್(3)/06/2017–18/623, ದಿನಾಂಕ: 01–08–2018.

---

ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಈ ಕೆಳಕಂಡ ವಿಭಾಗಗಳಲ್ಲಿ 2018–19 ನೇ ಶೈಕ್ಷಣಿಕ ಸಾಲಿನಲ್ಲಿ ಲಭ್ಯವಿರುವ ಹೆಚ್ಚುವರಿ ಬೋಧನಾ ಕಾರ್ಯಭಾರವನ್ನು ನಿರ್ವಹಿಸಲು ಅತಿಥಿ ಉಪನ್ಯಾಸಕರುಗಳ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ನೇಮಕಾತಿಯಡಿ ನೇಮಕವಾಗುವ ಅತಿಥಿ ಉಪನ್ಯಾಸಕರುಗಳಿಗೆ ಮಾಸಿಕ ಸಂಚಿತ ವೇತನ ರೂ. 25,000=00(ರೂ. ಇಪ್ಪತ್ತೈದು ಸಾವಿರ)ಗಳನ್ನು ನಿಗದಿಪಡಿಸಲಾಗಿದೆ. ಅಭ್ಯರ್ಥಿಗಳು ಕಾಲೇಜಿನ ವೆಬ್‌ಸೈಟ್ www.ubdtce.org/guestfaculty ಮೂಲಕ ಆನ್‌ಲೈನ್‌ನಲ್ಲಿ ದಿನಾಂಕ: 07–08–2018 ರ ಬೆಳಗ್ಗೆ 10.00 ಗಂಟೆಯಿಂದ ದಿನಾಂಕ: 16–08–2018 ರವರೆಗೆ ಸಂಜೆ 5.00 ಗಂಟೆಯವರೆಗೆ ಮಾತ್ರ ಸಲ್ಲಿಸತಕ್ಕದ್ದು.

ಅರ್ಜಿಯನ್ನು ಆನ್‌ಲೈನ್ ಮೂಲಕ ಸಲ್ಲಿಸಿದ ನಂತರ ಅದನ್ನು ಪ್ರಿಂಟ್ ತೆಗೆದು ಅರ್ಜಿಯ ಜೊತೆ ಅರ್ಜಿ ಶುಲ್ಕಕ್ಕೆ ಸಂಬಂಧಿಸಿದಂತೆ ಎಸ್.ಬಿ.ಐ. ಆನ್‌ಲೈನ್ ಮೂಲಕ ಪಾವತಿಸಿದ ಬ್ಯಾಂಕ್ ಚಲನ್, ಶೈಕ್ಷಣಿಕ ದಾಖಲೆಗಳಾದ ಅಂಕ ಪಟ್ಟಿಗಳು, ಪ್ರಮಾಣ ಪತ್ರಗಳು ಮತ್ತು ಮೀಸಲಾತಿಗೆ ಸಂಬಂಧಪಟ್ಟ ದಾಖಲೆಗಳ ದೃಢೀಕೃತ ಪ್ರತಿಗಳನ್ನು ಲಗತ್ತಿಸಿ, ಇವುಗಳನ್ನು ಪ್ರಾಚಾರ್ಯರು, ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜು, ದಾವಣಗೆರೆ – 577 004 – ಇವರಿಗೆ ದಿನಾಂಕ: 20–08–2018 ರ ಸಂಜೆ 5.00 ಗಂಟೆಯೊಳಗಾಗಿ ತಲುಪುವಂತೆ ಅಂಚೆಯ ಮೂಲಕ ಅಥವಾ ಖುದ್ದಾಗಿ ಸಲ್ಲಿಸಲು ತಿಳಿಸಲಾಗಿದೆ.

**ಅರ್ಜಿ ಶುಲ್ಕ** : ಈ ಕೆಳಗೆ ತಿಳಿಸಿರುವ ಪ್ರಕಾರ ಅರ್ಜಿ ಶುಲ್ಕವನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು.

| | |
|---|---|
| ಸಾಮಾನ್ಯ ವರ್ಗ, ಪ್ರವರ್ಗ 2(ಎ), 2(ಬಿ), 3(ಬಿ) ಗೆ ಸೇರಿದ ಅಭ್ಯರ್ಥಿಗಳಿಗೆ | ರೂ. **500/–** |
| ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ – 1ಕ್ಕೆ ಸೇರಿದ ಅಭ್ಯರ್ಥಿಗಳಿಗೆ | ರೂ. **250/–** |

ಅರ್ಜಿ ಶುಲ್ಕವನ್ನು ಎಸ್.ಬಿ.ಐ. ಆನ್‌ಲೈನ್ ಸ್ಟೇಟ್ ಬ್ಯಾಂಕ್ ಕಲೆಕ್ಟ್ ಮುಖಾಂತರ ನೆಟ್ ಬ್ಯಾಂಕ್‌ನಲ್ಲಿ ಚಲನ್ ಮೂಲಕ ಪಾವತಿಸುವುದು, ಅರ್ಜಿಯ ಶುಲ್ಕ ಪಾವತಿಸಿದ ಮೂಲ ಚಲನ್‌ನ್ನು ಅರ್ಜಿ ಜೊತೆ ಲಗತ್ತಿಸಬೇಕು.

(**ಸೂಚನೆ (1)** :– ಎಸ್.ಬಿ.ಐ. ಆನ್‌ಲೈನ್ ಮುಖಾಂತರ ಅರ್ಜಿ ಶುಲ್ಕ ಪಾವತಿಸಲು ಈ ಕೆಳಕಂಡ ಕ್ರಮಗಳನ್ನು ಅನುಸರಿಸಲು ತಿಳಿಸಲಾಗಿದೆ.)

For Online Fee Payment :-

Go to www.online sbi.com ⟹ sbcollect ⟹ Karnataka ⟹ educational institutions ⟹ ubdt college of engineering ⟹ category ⟹ Guest Faculty application fee

**ಸೂಚನೆ (2)** :- ಸೂಚನೆ (1) ರಲ್ಲಿ ತಿಳಿಸಿರುವಂತೆ ಕ್ರಮಗಳನ್ನು ಅನುಸರಿಸಿ ಎಸ್.ಬಿ.ಐ. ಆನ್‌ಲೈನ್ ಮೂಲಕ ಅರ್ಜಿ ಶುಲ್ಕವನ್ನು ನೆಟ್‌ಬ್ಯಾಂಕಿಂಗ್ ಮೂಲಕ ಪಾವತಿಸಬಹುದು ಅಥವಾ ಚಲನ್ ಜನರೇಟ್ ಮಾಡಿ, ಎಸ್.ಬಿ.ಐ. ಬ್ಯಾಂಕ್‌ನ ಯಾವುದೇ ಬ್ರಾಂಚ್‌ನಲ್ಲಿ ಅರ್ಜಿ ಶುಲ್ಕ ಪಾವತಿಸಲು ಅವಕಾಶವಿರುತ್ತದೆ.

ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ ಮುಗಿದ ನಂತರ ಸಂದರ್ಶನ ನಡೆಸುವ ಮೂಲಕ ಅತಿಥಿ ಉಪನ್ಯಾಸಕರುಗಳನ್ನು ಆಯ್ಕೆ ಮಾಡಲಾಗುವುದು.

ಸಂದರ್ಶನ ನಿಗದಿ ಪಡಿಸಿದ ದಿನಾಂಕಗಳನ್ನು ಪ್ರತ್ಯೇಕವಾಗಿ ಅಭ್ಯರ್ಥಿಗಳಿಗೆ ತಿಳಿಸಲಾಗುವುದಿಲ್ಲ. ಆದರೆ ಸಂದರ್ಶನ ನಡೆಯುವ ದಿನಾಂಕ ಮತ್ತು ವೇಳೆ, ಸಂದರ್ಶನ ನಡೆಯುವ ಸ್ಥಳದ ಮಾಹಿತಿಯ ವಿವರಗಳನ್ನು ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜಿನ ವೆಬ್‌ಸೈಟ್ www.ubdtce.org ನಲ್ಲಿ ಪ್ರಕಟಿಸಲಾಗುವುದು. ಅಭ್ಯರ್ಥಿಗಳು www.ubdtce.org ವೆಬ್‌ಸೈಟ್‌ನಲ್ಲಿ ಸಂದರ್ಶನ ದಿನಾಂಕವನ್ನು ಖಚಿತ ಪಡಿಸಿಕೊಂಡು ಸಂದರ್ಶನಕ್ಕೆ ಮೂಲ ದಾಖಲಾತಿಗಳೊಂದಿಗೆ ಹಾಜರಾಗಲು ಈ ಮೂಲಕ ತಿಳಿಯಪಡಿಸಲಾಗಿದೆ.